ನನ್ನ ಕಣ್ಣುಗಳನ್ನು ಭೇದಿಸುವುದರೊಂದಿಗೆ' ಕಿಟಾರನೆ ಕಿರುಚಿಕೊಳ್ಳುತ್ತ ನಿದ್ದೆಯಿಂದ ಎದ್ದು ಬಿಡುತ್ತಿದ್ದೆ. ಕಂಪಿಸುವ ಕೈಗಳಿಂದ ಕತ್ತಲಲ್ಲೇ ನನ್ನ ಕಣ್ಣುಗಳನ್ನು ತಡವಿ ನೋಡಿಕೊಳ್ಳುತ್ತಿದ್ದೆ. ಭಯದಿಂದ, ಸುರಿಯುತ್ತಿದ್ದ ಕಣ್ಣೀರು ರಕ್ತದ ಧಾರೆಯಿರಬಹುದೆಂದು ಭಾವಿಸಿ ವಿಹ್ವಲನಾಗುತ್ತಿದ್ದೆ. ನನ್ನ ಚೀರುವ ಧ್ವನಿಯನ್ನು ಕೇಳಿದ ಚೇಟಿಯರು ದೀಪದ ಪ್ರಕಾಶವನ್ನು ಹೆಚ್ಚಿಸುತ್ತಿದ್ದರು. ಶಯ್ಯಾಗೃಹದ ಗೋಡೆಗಳ ಮೇಲಿನ ಚಿತ್ತಾರ ಕಣ್ಣಿಗೆ ಬೀಳುತ್ತಿರುವಂತೆಯೆ, ಓಹ್, ನನ್ನ ಕಣ್ಣು ಹೋಗಿಲ್ಲ, ನಾನು ಕುರುಡನಾಗಿಲ್ಲ ಎಂಬ ಸಮಾಧಾನ ಮನಸ್ಸನ್ನು ತುಂಬುತ್ತಿತ್ತು.

ಹೌದು, ನನ್ನ ಕಣ್ಣಿನ ಬಗ್ಗೆ ನನಗೆ ತುಂಬ ಹೆಮ್ಮೆ. 'ಎಷ್ಟು ಮೋಹಕವಾದ ನಯನಗಳು' ಎಂದು ಅವರಿವರು ಹೊಗಳಿದಾಗ ಉಬ್ಬುತ್ತಿದ್ದೆ. ನನ್ನ ತಾಯಿ, ಸಾಮ್ರಾಟ ಅಶೋಕನ ಪತ್ನಿ ಪದ್ಮಾವತಿ ನನ್ನ ಕಣ್ಣುಗಳ ಚೆಲುವನ್ನು ಕಂಡೇ ನನಗೆ ಕುಣಾಲ ಎಂದು ಹೆಸರಿಟ್ಟಳಂತೆ. ಕುಣಾಲ ಶಬ್ದದ ಅರ್ಥ ಕಮಲವೂ ಹೌದು, ಮೋಹಕ ನೇತ್ರವೂ ಹೌದು. ಚೆಲುವಾದ ಕಣ್ಣುಳ್ಳ ಪಕ್ಷಿಗೂ ಕುಣಾಲ ಎಂದೇ ಕರೆಯುತ್ತಾರಲ್ಲವೆ.

ನನಗೆ ಕುಣಾಲನೆಂದು ಹೆಸರಿಟ್ಟ ಹೆತ್ತತಾಯಿ ಬಹಳ ದಿನ ಬದುಕಲಿಲ್ಲ. ನನ್ನ ಕಣ್ಣುಗಳು ಆಕೆಯ ಬಿಂಬವನ್ನು ಪಾಪೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುವ ಮುನ್ನವೇ ದೂರದ ನಕ್ಷತ್ರಲೋಕ ಸೇರಿದಳು. ಆಗ ನನ್ನನ್ನು ಹೆತ್ತತಾಯಿಗಿಂತಲೂ ಹೆಚ್ಚಿನ ಮಮತೆಯಿಂದ ಸಾಕಿದವಳು ಚಕ್ರವರ್ತಿ ಅಶೋಕ ಸಾಮ್ರಾಟನ ಇನ್ನೋರ್ವ ಪತ್ನಿ ಕೌರ್ವಕಿ.

ಅವ್ವ ಎಂದ ತಕ್ಷಣ ನನ್ನೆದುರಿಗೆ ಬರುವ ರೂಪ ಕೌರ್ವಕಿಯದೇ. ನನ್ನ ಬಾಲ್ಯದ ಎಲ್ಲ ಸವಿನೆನಪುಗಳು ಕೌರ್ವಕಿ ಅವ್ವನೊಂದಿಗೆ ತಳಕು ಹಾಕಿಕೊಂಡಿವೆ. ನೋಡಿದವರೆಲ್ಲ ಕೌರ್ವಕಿಗೆ, 'ಹೊಟ್ಟೆಯಲ್ಲಿ ಹುಟ್ಟಿದ ಮಗ ತಿವಾಲನಿಗಿಂತ ಕುಣಾಲನ ಮೇಲೆಯೆ ಹೆಚ್ಚು ಪ್ರೀತಿ' ಎನ್ನುತ್ತಿದ್ದುದು ನಿಜವೂ ಆಗಿತ್ತು. ತಿವಾಲ, ನಾನು ಇಬ್ಬರೂ ಎದುರಿಗಿದ್ದರೆ ಅವ್ವ ಮೊದಲು ನನ್ನನ್ನು ಬರಸೆಳೆದು ಅಪ್ಪಿಕೊಂಡು ನನ್ನ ಕಣ್ಣುಗಳನ್ನು ಮುದ್ದಿಸುತ್ತಾ, 'ಎಂಥ ಚಂದದ ನಯನಗಳು ನಿನ್ನವು ಮಗು, ಶಾಂತ ಸರೋವರದಲ್ಲಿ ಈಜಿ ಬಂದಂತಾಗುತ್ತದೆ' ಎನ್ನುತ್ತಿದ್ದಳು. ಅಂಥ ಸುಂದರ ಕಣ್ಣುಗಳನ್ನು ನಾನು ನನ್ನ ಕೈಯಾರೆ, ಕಾಯ್ದ ಸರಳನ್ನು ಚುಚ್ಚಿಕೊಂಡು ಸುಟ್ಟುಕೊಂಡು ಬಿಟ್ಟೆ ಎಂಬ ಸುದ್ದಿ ತಿಳಿದಾಗ ಅರಮನೆಯ ಗೋಡೆ ಗೋಡೆಗಳು ನಡುಗಿ ಹೋಗುವಂತೆ ಅವ್ವ ಕೌರ್ವಕಿ ಕಿಟಾರನೆ ಕಿರುಚುತ್ತ ಹುಚ್ಚಳಂತೆ ಓಡಾಡಿದಳಂತೆ.

'ಹಾಂ, ಕಣ್ಣುಗಳನ್ನೇಕೆ ಸುಟ್ಟುಕೊಂಡೆ' ಎಂದು ಕೇಳುತ್ತಿರಾ? ಅದೊಂದು ದೊಡ್ಡ ದುರಂತ ಕಥೆ. ಮುಂದೆ ಸಂದರ್ಭ ಬಂದಾಗ ಹೇಳುವೆ.

### ತಿಷ್ಯರಕ್ಷಿತಾ

'ಸಾಮ್ರಾಟ ಅಶೋಕ ನಿನ್ನನ್ನು ವರಿಸುತ್ತಾನಂತೆ' ಎಂದು ಗೆಳತಿ ಮಣಿಮಾಲಿನಿ ಬಂದು ಹೇಳಿದಾಗ ಎದೆಯಲ್ಲಿ ಸಂತೋಷ ಸೆಲೆಯೊಡೆದಿತ್ತು. ಎದೆಯಲ್ಲಿ ಹರ್ಷದ ಹೊಳೆ ಹರಿದಿತ್ತು. ಅಶೋಕನ ಹೆಸರು ಕೇಳದವರು ಭರತಖಂಡದಲ್ಲಿ ಯಾರೂ ಇರಲಿಲ್ಲ. ಆತನ ಪರಾಕ್ರಮ, ಸೌಂದರ್ಯ, ಸಾಹಸ, ಜಾಣ್ಮೆ ಎಲ್ಲವೂ ಮನೆ ಮಾತಾಗಿದ್ದವು. ಚಾಣಕ್ಯನೆನಿಸಿಕೊಂಡ ಚಣಕನ ಮಗ ವಿಷ್ಣುಗುಪ್ತನ ಆಶೀರ್ವಾದ ಪಡೆದವನಲ್ಲವೆ ಅಶೋಕ? ಅಶೋಕನ ಹೆಸರು ಕೇಳಿದರೆ ಸಾಮಾನ್ಯರಿರಲಿ, ರಾಜಮಹಾರಾಜರು ಕೂಡ ಹೆದರಿ ನಡುಗುತ್ತಿದ್ದರು. ತಂದೆ ಬಿಂದುಸಾರನನ್ನು ಸೆರೆಯಲ್ಲಿರಿಸಿದ, ಸುಘುಮರಾದಿಯಾಗಿ ತನ್ನ ಸೋದರರನ್ನೆಲ್ಲ ಕೊಂದ ಚಂಡ ಅಶೋಕನ ಕ್ರೌರ್ಯದ ಕಥೆಗಳೂ ಅವರ ಭಯಕ್ಕೆ ಕಾರಣವಾಗಿರಬಹುದು.

ಆತ ಎಷ್ಟಾದರೂ ಮಹಾರಾಜ; ಅಲ್ಲಲ್ಲ, ಚಕ್ರವರ್ತಿ. ಆತನ ನಡೆಯನ್ನು ಪ್ರಶ್ನಿಸುವ ಎದೆಗಾರಿಕೆ ಯಾರಿಗಿದೆ? ವಿಸ್ತಾರವಾದ ಸಾಮ್ರಾಜ್ಯವನ್ನು ಆಳುವ ಸಾಮ್ರಾಟ ನನ್ನನ್ನು ಮೆಚ್ಚಿಕೊಂಡಿದ್ದಾನೆ ಎಂಬುದನ್ನು ಕೇಳಿ ಪುಳಕಿತಳಾದೆ.

ಗೆಳತಿ ಮಣಿಮಾಲಿನಿ, 'ಸಾಮ್ರಾಟ ಅಶೋಕ ನಿನ್ನ ಸೌಂದರ್ಯಕ್ಕೆ ಸೋತು ಹೋಗಿದ್ದಾನೆ. ಪ್ರಚಂಡ ರಾಜರುಗಳ ಕಿರೀಟಗಳು ಆತನ ಪಾದಗಳ ಹೆಬ್ಬೆರಳುಗಳ ಉಗುರುಗಳಲ್ಲಿ ಪ್ರತಿಫಲಿಸುತ್ತಿರುವ ಪರಮ ಪರಾಕ್ರಮಿ ಅಶೋಕ ನಿನ್ನ ಕಣ್ಣೋಟಕ್ಕೆ, ಮೈಮಾಟಕ್ಕೆ ಸೋತು ಹೋಗಿದ್ದಾನೆ.